OS 184/2013
PW1

ದಿನಾಂಕ **19.08.2019** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲು</u>** ಃ ಪ್ರತಿವಾದಿ **16** ರಿಂದ **20** ರವರ ಪರವಾಗಿ ಶ್ರೀ ಹೆಚ್ ಎಸ್ ಎಂ ವಕೀಲರಿಂದ ಃ

ದಾವಾ ಆಸ್ತಿಗಳನ್ನು ಮರಿಯಮ್ಮ ಹೆಂಗಸ್ಸು ಎಂಬುವವರು ಗೇಣಿಗೆ ಸಾಗುವಳಿ ಮಾಡುತ್ತಿದ್ದ ಬಗ್ಗೆ ದಾಖಲೆಗಳು ಇವೆಯಾ ಎನ್ನುವ ಪ್ರಶ್ನೆಗೆ ಸಾಕ್ಷಿಯ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಆ ರೇತಿ ಮರಿಯಮ್ಮ ಹೆಂಗಸ್ಸು ರವರು ದಾವಾ ಆಸ್ತಿಗಳನ್ನು ಗೇಣಿ ಹಕ್ಕಿನ ನೆಲೆಯಲ್ಲಿ ಸಾಗುವಳಿ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಗಣಪ ಜೋಯಿಷ ಎಂಬುವವರು ದಾವಾ ಆಸ್ತಿಗಳ ಧಣಿಗಳಾಗಿರಲಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿದಂತೆ ದಾವಾ ಆಸ್ತಿಗಳು ಅಳಿಯ ಸಂತಾನ ಆಸ್ತಿಗಳು ಅಲ್ಲ ಎಂದರೆ ಸರಿಯಲ್ಲ. ನಾನು ನನ್ನ ವ ುಖ್ಯ ವಿಚಾರಣೆಯಲ್ಲಿ ತಿಳಿಸಿದಂತೆ ಯಾವುದೇ ಅಳಿಯ ಸಂತಾನ ಕುಟುಂಬ ಇರಲಿಲ್ಲ ಎಂದರೆ ಸರಿಯಲ್ಲ. ಕೂಸು ಪೂಜಾರ್ತಿ ರವರು ದಾವಾ ಆಸ್ತಿಗಳನ್ನು ಅಳಿಯ ಸಂತಾನ ಕುಟುಂಬದ ಯಾಜಮಾನ್ತಿಯಾಗಿ ಆಡಳಿತ ನಡೆಸಿರುವುದಿಲ್ಲ ಎಂದರೆ ಸರಿಯಲ್ಲ. ಮರಿಯಮ್ಮ ಹೆಂಗಸ್ಸು ಮತ್ತು ಅವರ ಮಕ್ಕಳಾದ ನಾವು ಪೂಜಾರಿ,ಅಪ್ಪು ಪೂಜಾರಿ, ಚಂದಯ್ಯ ಪೂಜಾರಿ ಮತ್ತು ಸಿದ್ದುಪೂಜಾರಿ ರವರು ಯಾವತ್ತು ದಾವಾ ಅಸ್ತಿಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಕೂಸು ಪೂಜಾರ್ತಿ ರವರು ದಾವಾ ಆಸ್ತಿಗಳನ್ನು ತಮ್ಮ ಸ್ವಂತ ನೆಲೆಯಲ್ಲಿ ಗೇಣಿಗೆ ಪಡೆದುಕೊಂಡ ಆಸ್ತಿಗಳು ಎಂದರೆ ಸರಿಯಲ್ಲ. ಕೂಸು ಪೂಜಾರ್ತಿ ರವರು ತಮ್ಮ ಸ್ವಂತ ನೆಲೆಯಲ್ಲಿ ಡಿಕ್ಲರೇಶನ್ ಅರ್ಜಿ ಸಲ್ಲಿಸಿದ ಮೇರೆಗೆ ಭೂನ್ಯಾಯ ಮಂಡಳಿಯಿಂದ ಸ್ವಂತ ನೆಲೆಯಲ್ಲಿ ಅವರಿಗೆ ಭೂಮಿ ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ. ಕೂಸು ಪೂಜಾರ್ತಿ ರವರು ಅನಕ್ಷರಸ್ಥರು ಎಂದರೆ ಸರಿ.

ಈ ಹಿಂದೆ ಮೂಲ ದಾವೆ ಸಂಖ್ಯೆ **178/98** ರಲ್ಲಿ ಡಿಕ್ರಿಯಾದಂತೆ ದಾವಾ ಅಸ್ತಿಗಳು ಕೂಸು ಪೂಜಾರ್ತಿ ರವರ ಮಕ್ಕಳ ವಿಭಾಗಕ್ಕೆ ಬಂದಂತಹ ಆಸ್ತಿಗಳು ಎಂದರೆ ಸರಿಯಲ್ಲ. ಸದ್ರಿ ಮೂಲ ದಾವೆಯ ಅಂತಿಮ ಅಮಲ್ಜಾರಿ ಸಂಖ್ಯೆ **19/2011** ರ ಪ್ರಕಾರ ದಾವಾ ಅಸ್ತಿಗಳು ಅಯಾ

ಹಿಸ್ಸೆದಾರರುಗಳಿಗೆ ವಿಭಾಗವಾಗಿ ಅವರ ಸ್ವಾಧೀನದಲ್ಲಿದ್ದು ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಕೂಸು ಪೂಜಾರ್ತಿ ರವರ ಮಕ್ಕಳನ್ನು ಹೊರತುಪಡಿಸಿ ಬೇರೆ ಯಾರಿಗೂ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಪ್ರಸ್ತುತ ದಾವೆಯಲ್ಲಿ ಹಾಜರುಪಡಿಸಿರುವ ನಿಪಿ-1 ಸಂತತಿ ನಕ್ಷೆಯನ್ನು ಪ್ರಕರಣಕ್ಕೆ ಪೂರಕವಾಗುವಂತೆ ತಯಾರಿಸಿ ಹಾಜರುಪಡಿಸಿದ ನಕ್ಷೆ ಎಂದರೆ ಸರಿಯಲ್ಲ. ನಿಪಿ-1 ಸುಳ್ಳು ಸಂತತಿ ನಕ್ಷೆ ಎಂದರೆ ಸರಿಯಲ್ಲ. ನಾನು ದಾವೆಯಲ್ಲಿ ಕೇಳಿದ ಯಾವುದೇ ನಿವೃತ್ತಿಯನ್ನು ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಎ.ಹೆ.ಸಿ.ನ್ಯಾ ಮತ್ತು ಪ್ರ ದ ನ್ಯಾ ದಂ,
ಕಾರ್ಕಳ